# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 766(715) |
| **ಮಾನ್ಯ ಸದಸ್ಯರ ಹೆಸರು** | : | ಶ್ರೀ ಅಡಗೂರು ಹೆಚ್. ವಿಶ್ವನಾಥ್ (ನಾಮನಿರ್ದೇಶನ ಹೊಂದಿದವರು) |
| **ಉತ್ತರಿಸುವ ಸಚಿವರು** | : | ಉನ್ನತ ಶಿಕ್ಷಣ ಸಚಿವರು |
| **ಉತ್ತರಿಸಬೇಕಾದ ದಿನಾಂಕ** | : | 16.12.2024 |

| | ಪ್ರಶ್ನೆ | ಉತ್ತರ |
|---|---|---|
| ಅ) | ಅಲಯನ್ಸ್ ವಿಶ್ವವಿದ್ಯಾನಿಲಯದಿಂದ ಅಕ್ರಮವಾಗಿ ಡಾಕ್ಟರೇಟ್ ಪದವಿಯನ್ನು ಪಡೆದಿರುವ ಈ ಹಿಂದಿನ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಯವರ ಆರೋಪಕ್ಕೆ ಸಂಬಂಧಿಸಿದಂತೆ ವಿಸ್ತೃತವಾದ ತನಿಖೆ ನಡೆಸಲು ತಜ್ಞರ ಸಮಿತಿಯನ್ನು ರಚಿಸಿ ಶಿಕ್ಷಣ ಇಲಾಖೆಯು ದಿನಾಂಕ: 26.03.2024ರ ಆದೇಶ ಹೊರಡಿಸಿದ್ದು, ಸದರಿ ಸಮಿತಿಯು ಸರ್ಕಾರಕ್ಕೆ ವರದಿ ನೀಡಿದೆಯೇ; | ಸರ್ಕಾರಕ್ಕೆ ವರದಿ ನೀಡಿರುತ್ತದೆ. |
| ಆ) | ನೀಡಲಾದ ವರದಿಯನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಲಾಗಿದೆಯೇ; ಮಾಡಿದ್ದಲ್ಲಿ ಯಾವ ಕ್ರಮ ಕೈಗೊಳ್ಳಾಗಿದೆ; | ಶ್ರೀ ಬಿ.ಎಸ್. ಶಿವಣ್ಣ, ಕೆ.ಪಿ.ಸಿ.ಸಿ ಪ್ರಧಾನ ಕಾರ್ಯದರ್ಶಿ ಇವರು ಅಲೆಯನ್ಸ್ ವಿಶ್ವವಿದ್ಯಾಲಯದಿಂದ ಅಕ್ರಮವಾಗಿ ಡಾಕ್ಟರೇಟ್ ಪದವಿಯನ್ನು ಪಡೆದಿರುತ್ತಾರೆಂದು ಶ್ರೀ ಎಲ್. ಜಯಲಿಂಗೇಗೌಡ, ವಿಜಯನಗರ, ಬೆಂಗಳೂರು ಇವರು ಆರೋಪಗಳನ್ನು ಮಾಡಿರುವ ಹಿನ್ನೆಲೆಯಲ್ಲಿ, ಸರ್ಕಾರದ ಆದೇಶ ಸಂಖ್ಯೆ:ಇಡಿ 43 ಯುಆರ್‌ಸಿ2020, ದಿನಾಂಕ:26-03-2024ರಲ್ಲಿ ತಜ್ಞರ ಸಮಿತಿಯನ್ನು ರಚಿಸಿ ವರದಿಯನ್ನು ನೀಡುವಂತೆ ಕರ್ನಾಟಕ ಉನ್ನತ ಶಿಕ್ಷಣ ಪರಿಷತ್ತನ್ನು ಕೋರಲಾಗಿತ್ತು.<br><br>ಅದರಂತೆ, ಉನ್ನತ ಶಿಕ್ಷಣ ಪರಿಷತ್ತಿನಿಂದ ರಚಿಸಲಾದ ತಜ್ಞರ ಸಮಿತಿಯು ನಿಗದಿತ ಕ್ರಮವಿಧಾನವನ್ನು ಅನುಸರಿಸಿ ದಿನಾಂಕ:22-05-2024 ರಂದು ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತದೆ. |

| | | |
|---|---|---|
| ಇ) | ಸದರಿ ವರದಿಯು ಸತ್ಯಕ್ಕೆ ದೂರವಾಗಿರುವುದಾಗಿ ಸರ್ಕಾರಕ್ಕೆ ದೂರು ಬಂದಿದೆಯೆ; ಯಾವಾಗ ಬಂದಿದೆ: ಬಂದಿದ್ದಲ್ಲಿ ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ? | ಈ ವರದಿಯಲ್ಲಿ ಅಲಯನ್ಸ್ ವಿಶ್ವವಿದ್ಯಾಲಯವು ಶ್ರೀ ಬಿ. ಎಸ್. ಶಿವಣ್ಣ ರವರಿಗೆ 2017ರಲ್ಲಿ ನೀಡಿರುವ ಗೌರವ ಡಾಕ್ಟರೇಟ್ ಅಲೈಯನ್ಸ್ ವಿಶ್ವವಿದ್ಯಾಲಯದ ಅಧಿನಿಯಮದ ಪ್ರಕಾರ ಹಾಗೂ ಅದಕ್ಕೆ ಸಂಬಂಧಿಸಿದ Board of Governor, ಇತರೆ ಪ್ರಾಧಿಕಾರದ ಅನುಮೋದನೆ ಮತ್ತು ನಿಗದಿಪಡಿಸಿರುವ ಮಾನದಂಡಗಳಡಿಯಲ್ಲಿ ಗೌರವ ಡಾಕ್ಟರೇಟ್ ನ್ನು ಮಾನ್ಯ ಘನತೆವೆತ್ತ ರಾಜ್ಯಪಾಲರ ಮುಖೇನ ದಿನಾಂಕ:17-08-2017 ರಂದು ಅಲಯೆನ್ಸ್ ವಿಶ್ವವಿದ್ಯಾಲಯದಿಂದ ನೀಡಿರುತ್ತಾರೆ.<br><br>ಶ್ರೀ ಎಲ್. ಜಯಲಿಂಗೇಗೌಡರು ಮಾಡಿರುವ ಆಪಾದನೆಗಳಲ್ಲಿ ಯಾವುದೇ ಹುರುಳಿಲ್ಲವೆಂದು ಸಮಿತಿಯು ಒಮ್ಮತದಿಂದ ತೀರ್ಮಾನಕ್ಕೆ ಬಂದಿರುತ್ತದೆ ಎಂದು ತಜ್ಞರ ಸಮಿತಿಯು ತಿಳಿಸಿರುತ್ತದೆ.<br><br>ಅರ್ಜಿದಾರರು ಮಾಡಿರುವ ಆಪಾದನೆಗಳಲ್ಲಿ ಸತ್ಯಾಂಶವಿರುವುದಿಲ್ಲವೆಂದು ಸದರಿ ತಜ್ಞರ ಸಮಿತಿಯು ನೀಡಿರುವ ವರದಿಯನ್ನು ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಅನುಮೋದನೆಗಳನ್ನು ಪಡೆದು ಘನತವೆತ್ರ ರಾಜ್ಯಪಾಲರ ಸಚಿವಾಲಯಕ್ಕೆ ಹಾಗೂ ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಅಡಗೂರು ಎಚ್. ವಿಶ್ವನಾಥ್ ಇವರಿಗೆ ಕಳುಹಿಸಲಾಗಿತ್ತು.<br><br>ಆದರೆ, ತಜ್ಞರ ಸಮಿತಿಯು ಸರ್ಕಾರಕ್ಕೆ ತಪ್ಪು ವರದಿ ಕೊಟ್ಟಿರುವುದಾಗಿ ತಜ್ಞರ ಸಮಿತಿಯ ವಿರುದ್ಧ ಕ್ರಮ ಕೈಗೊಳ್ಳುವಂತೆ, ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಅಡಗೂರು ಎಚ್. ವಿಶ್ವನಾಥ್, ಇವರು ಕೋರಿದ ಹಿನ್ನಲೆಯಲ್ಲಿ ಮತ್ತೊಮ್ಮೆ ಉನ್ನತ ಶಿಕ್ಷಣ ಪರಿಷತ್ತಿನಿಂದ ವರದಿಯನ್ನು ಪರಿಶೀಲಿಸಿ, ಸರ್ಕಾರಕ್ಕೆ ಸೂಕ್ತ ಅಭಿಪ್ರಾಯವನ್ನು ನೀಡುವಂತೆ, ಕೋರಲಾಗಿರುತ್ತದೆ.<br><br>ಇದಕ್ಕೆ ಪ್ರತಿಯಾಗಿ ಉನ್ನತ ಶಿಕ್ಷಣ ಪರಿಷತ್ತು ಪ್ರಕರಣದ ಕುರಿತಂತೆ ಅರ್ಜಿದಾರರು ಮತ್ತು ವಿಶ್ವವಿದ್ಯಾಲಯದ ಕುಲಸಚಿವರನ್ನು ಸಮಿತಿಯ ಸಭೆಗೆ ಆಹ್ವಾನಿಸಿ ಅವರುಗಳ ಹೇಳಿಕೆ ಮತ್ತು ಮಾಹಿತಿಗಳನ್ನು ಪಡೆದು ವಿವರವಾಗಿ ಪರಿಶೀಲಿಸಿ. ಅರ್ಜಿದಾರರಿಗೆ ಮತ್ತು ವಿಶ್ವವಿದ್ಯಾಲಯಕ್ಕೆ ಸಾಕಷ್ಟು ಕಾಲಾವಕಾಶ ನೀಡಿ ಅವರ ಹೇಳಿಕೆ ಮತ್ತು ದಾಖಲೆಗಳನ್ನು ಪಡೆದು, ಹಲವಾರು |

| | | |
|---|---|---|
| | | ಬಾರಿ ಸಭೆ ಸೇರಿ ವಿವರವಾಗಿ ಚರ್ಚಿಸಿ ಅಗತ್ಯವಿರುವ ದಾಖಲೆಗಳ ಪ್ರತಿಗಳೊಂದಿಗೆ ಸರ್ಕಾರಕ್ಕೆ ದಿನಾಂಕ:22.05.2024ರಂದು ವರದಿ ಸಲ್ಲಿಸಿರುತ್ತಾರೆ.<br><br>ಈ ಹಿನ್ನೆಲೆಯಲ್ಲಿ ತಜ್ಞರ ಸಮಿತಿಯು ಸಲ್ಲಿಸಿರುವ ವರದಿಯು ಸೂಕ್ತ ಹಾಗೂ ಸಮರ್ಪಕವಾಗಿರುವುದಾಗಿ ಕರ್ನಾಟಕ ಉನ್ನತ ಶಿಕ್ಷಣ ಪರಿಷತ್ತಿನಿಂದ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತದೆ. |

ಇಡಿ/ 647/ಯುಆರ್ ಸಿ/ 2024

(ಡಾ|| ಎಂ.ಸಿ. ಸುಧಾಕರ್)
ಉನ್ನತ ಶಿಕ್ಷಣ ಸಚಿವರು.